ಹೆಂಡತಿಗೆ ನನ್ನ ಪ್ರಾಂಜಲ ಸ್ವಭಾವ ಗೊತ್ತಿತ್ತು. ಹಾಗೇ ಮಾಡಿ ಬರುವೆ ಎಂದು ಮಗುವಿನ ಮುಡಿಯ ನೆಪದಲ್ಲಿ ನನ್ನ ಮನದಾಳದ ಅಪೇಕ್ಷೆಗೆ ತಕ್ಕಂತೆ ಹಳ್ಳಿಗೆ ಹೋಗಿದ್ದಳು.

ಕಾತುರದಿಂದ ಕಾದಿದ್ದೆ. ಹೆಂಡತಿ ಹತಾಶೆಯಲಿ ಏನನ್ನೂ ರೆಕಾರ್ಡ್ ಮಾಡಲಾಗದೆ ಹಿಂತಿರುಗಿ ಬಂದು ವಿಚಿತ್ರ ಅಸಹನೆಯಲ್ಲಿದ್ದಳು. ಅಂತಹ ಕ್ರೂರವಾದ ರೆಕಾರ್ಡಿಂಗ್ ತನ್ನಿಂದಾಗದು ಎಂದು ಆಕೆ ಒಂದು ಫೋಟೊ ಕೂಡ ತೆಗೆದಿರುವುದಿಲ್ಲ. ಹಾಗೆ ಫೋಟೊವನ್ನು ಅವಳ ಆ ದುರಂತ ಗಳಿಗೆಯಲಿ ತೆಗೆಯುವುದು ಕೂಡ ಕೊನೆಯ ಗಿರಾಕಿಯ ನೀತಿಯದೇ ಆಗಿರುತ್ತದೆ ಎಂದು ಹೆಂಡತಿಗೆ ಅರಿವಾಗಿತ್ತು. ವಿವರ ಕೇಳಲು ಹಿಂಜರಿದೆ. ಯಾರು ಕೂಡ ನೋಡಲಾಗದ ದೀನಸ್ಥಿತಿ ತಲುಪಿದ್ದಳು ಆ ನಿಮ್ಮ ಸುಂದರಿ ಅತ್ತೆ. ಕುರೂಪದ ನರಕದಲ್ಲಿ ತೆವಳುತ್ತಿದ್ದಳು. ಸವೆದು ಸವೆದು ಮೂಳೆ ಚಕ್ಕಳವಾಗಿ ಬಿದ್ದಿದ್ದಳು. ಹಿತ್ತಲ ತಿಪ್ಪೆಯ ಮರೆಯಲ್ಲಿ ಅವಳನ್ನು ಎಸೆದಿದ್ದರು. ಮಾತನಾಡಿಸಲು ಬಂದಿದ್ದಾರೆಂದು ತಿಳಿದು ಅಪಮಾನದಲಿ ನರಳಿ ತೆವಳಿಕೊಂಡು ಹೋಗಿ ಸಮಾಧಿಯಲಿ ಧುಮುಕಿ ಬಚ್ಚಿಟ್ಟುಕೊಂಡಂತೆ ಕಂಬಳಿ ಹೊದ್ದು ಮಾಯವಾದಳು. ನಿಮ್ಮಂತವರು ಆ ರೂಪದ ಹೆಣ್ಣನ್ನು ಕಂಡಿದ್ದೇ ಆದರೇ ಅಲ್ಲೇ ಬಿದ್ದು ಆಘಾತದಲಿ ಸತ್ತೇ ಹೋಗುವಿರೇನೊ ಎಂದು ಕ್ಯಾಮರಾವನ್ನು ಉಪೇಕ್ಷೆಯಲಿ ಅತ್ತ ಇಟ್ಟಳು.

ಪುರುಷ ಅಹಂಕಾರದ ಸುಖದ ನಾಗರಿಕತೆಗೆ ಹಿಡಿದಿರುವ ಭಯಾನಕ ಕಾಯಿಲೆಗೆ ಯಾವುದು ಮದ್ದು ಎಂದು ಇರುಳೆಲ್ಲ ನರಳಿದೆ. ಅತ್ತ ಕನಸಿಗೆ ಬಂದು ಎಲ್ಲ ಕತೆಯನ್ನು ಹೇಳುತ್ತಿದ್ದಳು. ಆತ್ಮಕ್ಕೆ ಅವನೆಲ್ಲ ತುಂಬಿಕೊಂಡು ಎಚ್ಚರಗೊಂಡೆ.

## ಮೊಗಳ್ಳಿ ಗಣೇಶ್

ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿಯ ಗಣೇಶ್, ಕನ್ನಡ ಕಥನ ಪರಂಪರೆಗೆ ಹೊಸತನ ನೀಡಿದ ಕಥೆಗಾರ. ಕಾವ್ಯ, ವಿಮರ್ಶೆ, ಜಾನಪದ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು.

ಪ್ರಕಟಿತ ಕಥಾಸಂಗ್ರಹಗಳು: 'ಬುಗುರಿ', 'ಮಣ್ಣು', 'ಅತ್ತೆ', 'ಭೂಮಿ', 'ಕನ್ನೆಮಳೆ', 'ಮೊಗಳ್ಳಿ ಕಥೆಗಳು' (ಆವರೆಗಿನ ಬಹುಪಾಲು ಕಥೆಗಳ ಸಂಕಲನ), 'ದೇವರ ದಾರಿ'. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಅವರ ಕತೆಗಳು ನಾಲ್ಕು ಬಾರಿ ಬಹುಮಾನ ಪಡೆದಿವೆ. 'ಒಂದು ಹಳೆಯ ಚಡ್ಡಿ' (1989), 'ಬುಗುರಿ' (1990), 'ಬತ್ತ' (1991), 'ತೋಪು' (1998).